# ಕರ್ನಾಟಕ ಸರ್ಕಾರ
# ಸಾರ್ವಜನಿಕ ಗ್ರಂಥಾಲಯ ಇಲಾಖೆ
# ಒಂದು ಪಕ್ಷಿನೋಟ

## ಸಾರ್ವಜನಿಕ ಗ್ರಂಥಾಲಯ ಒಂದು ಮುಕ್ತವಾದ ಸಾರ್ವಜನಿಕ ಸಂಸ್ಥೆ

" ಸಾರ್ವಜನಿಕ ಗ್ರಂಥಾಲಯ ಶ್ರೀ ಸಾಮಾನ್ಯನ ವಿಶ್ವವಿದ್ಯಾಲಯ " ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ. ಸರ್ಕಾರ ಸಾರ್ವಜನಿಕರಲ್ಲಿ ವಿದ್ಯೆ, ಜ್ಞಾನ, ಓದಿನ ಬಗೆಗೆ ಅಭಿರುಚಿ ಮುಂತಾದವುಗಳನ್ನು ಬೆಳೆಸಲು ಉದ್ದೇಶಿಸಿ ಸ್ಥಾಪನೆ ಮಾಡಿದ ಮುಕ್ತ ಸಾರ್ವಜನಿಕ ವ್ಯವಸ್ಥೆಯೇ ಈ ಗ್ರಂಥಾಲಯಗಳು. ಕರ್ನಾಟಕ ಸರ್ಕಾರ 1965ರಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ರೂಪಿಸಿ ಸಾರ್ವಜನಿಕ ಗ್ರಂಥಾಲಯಗಳ ಜಾಲದ ಬೆಳವಣಿಗೆಗೆ ಬುನಾದಿ ಹಾಕಿತು. ನಮ್ಮ ರಾಜ್ಯ ಇಡೀ ಭಾರತದಲ್ಲಿಯೇ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ದೃಷ್ಟಿಯಿಂದ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಸಾಹಿತ್ಯಾಭಿರುಚಿ, ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ತಾಂತ್ರಿಕ, ಸಾಮಾಜಿಕ ಪ್ರಜ್ಞೆ ಇವುಗಳನ್ನು ಸಾರ್ವಜನಿಕರಲ್ಲಿ ಮೂಡಿಸುವುದು ಈ ವ್ಯವಸ್ಥೆಯ ಮುಖ್ಯ ಗುರಿ. ಎಲ್ಲಾ ವಯೋಮಾನದವರಿಗೂ ಸುಲಭ ಜ್ಞಾನಾರ್ಜನೆ ನೀಡುವ ಸಾಮಾಜಿಕ ಶಿಕ್ಷಣವನ್ನು ಮುಂದುವರಿಸುವ ಮತ್ತು ಮಾಹಿತಿ ಪ್ರಸಾರ ಮಾಡುವ ಒಂದು ಜೀವಂತ ಶಕ್ತಿಯಾಗಿ ಸೇವೆ ಸಲ್ಲಿಸುತ್ತಿದೆ.

ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯಲ್ಲಿ ಶಿಕ್ಷಣ, ಮಾಹಿತಿ ಪ್ರಸಾರ, ಸಂಸ್ಕೃತಿ ಜ್ಞಾನ ಹಾಗೂ ಮನೋರಂಜನೆ ಪ್ರಮುಖ ಚಟುವಟಿಕೆಗಳಾಗಿವೆ. ಸಾಂಪ್ರದಾಯಕ ಶಿಕ್ಷಣವನ್ನು ಒಬ್ಬ ವ್ಯಕ್ತಿ ಎಲ್ಲಿಯವರೆಗೆ ಪಡೆದಿರಲಿ ಆತನಿಗೆ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾರ್ವಜನಿಕ ಗ್ರಂಥಾಲಯಗಳಿಗೆ ಮೊರೆಹೊಗುವುದು ಸಾಮಾನ್ಯವಾಗಿದೆ. ವ್ಯಕ್ತಿ ಮತ್ತು ಪುಸ್ತಕ ಜ್ಞಾನದ ನಡುವೆ ಸೇತುವೆಯಾಗಿ ಸಾರ್ವಜನಿಕ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಒತ್ತಾಸೆಯಾಗಿ ಸಹ ಸಾರ್ವಜನಿಕ ಗ್ರಂಥಾಲಯಗಳು ಕೆಲಸ ಮಾಡುತ್ತಿವೆ. ಎಲ್ಲ ಕ್ಷೇತ್ರಗಳ ಬಗೆಗೆ ಪ್ರಚಲಿತ ವಿಚಾರಗಳನ್ನು ಕುರಿತು ಮಾಹಿತಿ ಒದಗಿಸುವಲ್ಲಿ ಈ ಗ್ರಂಥಾಲಯಗಳ ಸೇವೆ ಅತ್ಯಾವಶ್ಯವಾದುದು. ಹಾಗೆಯೇ ಇಂದಿನ ಸಾಂಸ್ಕೃತಿಕ ಬದುಕನ್ನು ರೂಢಿಸುವಲ್ಲಿ ಮತ್ತು ಅನೇಕ ಬಗೆಯ ಕಲೆಗಳ ಅಭಿವೃದ್ಧಿ ಪಡಿಸುವಲ್ಲಿ ಇವು ಪ್ರಮುಖ ಕೇಂದ್ರಗಳಾಗಿವೆ. ಸಮಯವನ್ನು ಸಾರ್ಥಕವಾಗಿ ಸದುಪಯೋಗ ಪಡಿಸಿಕೊಳ್ಳಲು ಪುಸ್ತಕಗಳ ಮೂಲಕ ಜ್ಞಾನಾರ್ಜನೆ, ನಿರಂತರ ಕಲಿಕೆ ಮಾಡಿಕೊಳ್ಳಲು ಸಾರ್ವಜನಿಕರ ಪಾಲಿಗೆ ಸಾರ್ವಜನಿಕ ಗ್ರಂಥಾಲಯಗಳು ಉಪಯುಕ್ತವಾಗಿವೆ.

## ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿವರಣೆ:

ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರ ಅನ್ವಯ ರಾಜ್ಯದಲ್ಲಿ ಸಮಗ್ರವಾಗಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ಕಾರ್ಯ ರೂಪಕ್ಕೆ ತರಲಾಗಿದೆ. ರಾಜ್ಯ ಮಟ್ಟದಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ, ಒಂದು ಲಕ್ಷ ಜನ ಸಂಖ್ಯೆಗಿಂತ ಹೆಚ್ಚಿನ ಜನ ಸಂಖ್ಯೆ ಹೊಂದಿದ ಪ್ರತಿಯೊಂದು ನಗರದಲ್ಲಿ ನಗರ ಕೇಂದ್ರ ಗ್ರಂಥಾಲಯ ಹಾಗೂ ಶಾಖಾ ಗ್ರಂಥಾಲಯಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ, ತಾಲ್ಲೂಕು ಕೇಂದ್ರ, ಪುರಸಭೆ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮೀಣ ಗ್ರಂಥಾಲಯಗಳು ಹಾಗೂ ಅಲೆಮಾರಿ ಮತ್ತು ಕೊಳಚೆ ಪ್ರದೇಶ ಸ್ಥಳಗಳಲ್ಲಿ ಅಲೆಮಾರಿ ಹಾಗೂ ಕೊಳಚೆ ಪ್ರದೇಶ ಗ್ರಂಥಾಲಯಗಳು ಹಾಗೂ ಮಕ್ಕಳಿಗಾಗಿ ಸಮುದಾಯ ಮಕ್ಕಳ ಗ್ರಂಥಾಲಯಗಳು ಕಾರ್ಯನಿರತವಾಗಿವೆ.

ಗ್ರಂಥಾಲಯಗಳ ಸುವ್ಯವಸ್ಥೆಗೆ ರಾಜ್ಯ ಜಿಲ್ಲಾ ಹಾಗೂ ನಗರ ಕೇಂದ್ರ ಗ್ರಂಥಾಲಯಗಳ ವ್ಯಾಪ್ತಿಯಲ್ಲಿ ಗ್ರಂಥಾಲಯ ಪ್ರಾಧಿಕಾರಗಳು ಕಾರ್ಯ ನಿರ್ವಹಿಸುತ್ತಿವೆ. ಆಯಾ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಗೆ ಒಳಪಟ್ಟ ಯೋಜನೆಗಳನ್ನು ಸಿದ್ಧಪಡಿಸಿ ಅವುಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುತ್ತವೆ.

## ಸಾರ್ವಜನಿಕ ಗ್ರಂಥಾಲಯ ಚಟುವಟಿಕೆಗಳನ್ನು ಈ ಕೆಳಕಂಡಂತೆ ವಿಂಗಡಿಸಿದೆ.

1) **ರಾಜ್ಯ ಕೇಂದ್ರ ಗ್ರಂಥಾಲಯ:–** ರಾಜ್ಯ ಕೇಂದ್ರ ಗ್ರಂಥಾಲಯವು ಎಲ್ಲಾ ಭಾಷೆ ಹಾಗೂ ವಿಷಯಗಳ ಆಕರ ಗ್ರಂಥಗಳನ್ನು ಹಾಗೂ ಆಧುನಿಕ ಸಲಕರಣೆಗಳನ್ನು ಹೊಂದಿ ಒಂದು ಉತ್ತಮ "ಪರಾಮರ್ಶನ" ಗ್ರಂಥಾಲಯವಾಗಿದೆ. ಗ್ರಂಥಸ್ವಾಮ್ಯ, ಕಂಪ್ಯೂಟರ್, ಅಂಧರಿಗಾಗಿ ಬ್ರೈಲ್ ಲಿಪಿಯ ಪುಸ್ತಕಗಳು, ಉದ್ಯೋಗ ಮಾಹಿತಿ ಹಾಗೂ ನಿಯತಕಾಲಿಕೆಗಳ ವಿಭಾಗಗಳು ಈ ಗ್ರಂಥಾಲಯದ ಪ್ರಮುಖ ವಿಭಾಗಗಳಾಗಿವೆ. ಸದರಿ ಗ್ರಂಥಾಲಯವು ಶತಮಾನದ ಹೊಸ್ತಿಲಿನಲ್ಲಿ ಇರುವ ಪ್ರಯುಕ್ತ ಶತಮಾನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕ ಓದುಗರಿಗೆ ಇನ್ನೂ ಹೆಚ್ಚಿನದಾದ ಆಧುನಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಸೇವೆಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

2) **ನಗರ ಕೇಂದ್ರ ಗ್ರಂಥಾಲಯಗಳು:–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರ ಅಡಿಯಲ್ಲಿ ರಾಜ್ಯದ 26 ನಗರಗಳಲ್ಲಿ ನಗರ ಕೇಂದ್ರ ಗ್ರಂಥಾಲಯಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡಲಾಗುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ ಎಂದು ಐದು ವಲಯಗಳನ್ನಾಗಿ ವಿಂಗಡಿಸಲಾಗಿದೆ ಹಾಗೂ ಬೆಂಗಳೂರು ನಗರ ವ್ಯಾಪ್ತಿಯ 198 ವಾರ್ಡಗಳಲ್ಲಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಂಥಾಲಯ ಸೇವೆಯನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ.

3) **ಜಿಲ್ಲಾ ಕೇಂದ್ರ ಗ್ರಂಥಾಲಯ:–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ–1965, 16(1)(ಬಿ) ಪ್ರಕರಣದ ಅನ್ವಯ 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳು ಹಾಗೂ ಇದರ ಶಾಖೆಗಳು, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಓದುಗರಿಗೆ ತನ್ನ ಸೇವೆಯನ್ನು ಒದಗಿಸುತ್ತಿವೆ. ನಗರ ಕೇಂದ್ರ ಗ್ರಂಥಾಲಯಗಳಿರುವ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಜಿಲ್ಲಾ ಗ್ರಂಥಾಲಯಗಳ ಆಡಳಿತ ಕಛೇರಿಗಳನ್ನು ಮಾತ್ರ ಹೊಂದಿರುತ್ತದೆ.

4) **ಸಂಚಾರಿ ಗ್ರಂಥಾಲಯಗಳು:-** ಇಲಾಖೆಯ ಜನಪ್ರಿಯ ಸೇವಾ ಕಾರ್ಯಕ್ರಮದಲ್ಲಿ ಒಂದಾದ ಸಂಚಾರಿ ಗ್ರಂಥಾಲಯಗಳು ರಾಜ್ಯದ ಓದುಗ ಸಮುದಾಯದ ಮನೆ ಬಾಗಿಲಲ್ಲೇ ತನ್ನ ಸೇವೆಯನ್ನು ಒದಗಿಸುತ್ತಿದೆ. ರಾಜ್ಯದಲ್ಲಿ ಒಟ್ಟು 10 ಸಂಚಾರಿ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

5) **ಗ್ರಾಮ ಪಂಚಾಯಿತಿ ಗ್ರಂಥಾಲಯಗಳು:-** ಗ್ರಾಮೀಣ ಜನತೆ ಸಮಯವನ್ನು ಸಾರ್ಥಕವಾಗಿ ಸದುಪಯೋಗಪಡಿಸಿಕೊಳ್ಳಲು ಪುಸ್ತಕಗಳ ಮೂಲಕ ಜ್ಞಾನಾರ್ಜನೆ ಮಾಡಿಕೊಳ್ಳಲು, ನಿರಂತರ ಕಲಿಕೆಯನ್ನು ಹೊಂದಲು ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ನೆರವಾಗುತ್ತಿವೆ. ರಾಜ್ಯದಲ್ಲಿ ಒಟ್ಟು 5766 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯನಿರತವಾಗಿದೆ.

6) **ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ:-** ಮಕ್ಕಳಿಗಾಗಿ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯವನ್ನು 1994ರಲ್ಲಿ ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಸ್ಥಾಪಿಸಲಾಗಿದ್ದು, ಇದನ್ನು ಮಕ್ಕಳ ಉಪಯುಕ್ತ ಗ್ರಂಥಗಳ ಆಗರವಾಗಿ ಬೆಳೆಸಲು ಉದ್ದೇಶಿಸಲಾಗಿದೆ. ಎಲ್ಲಾ ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಮಕ್ಕಳ ವಿಭಾಗಗಳಿದ್ದು, ಮಕ್ಕಳಿಗೆ ಉಪಯುಕ್ತ ಪುಸ್ತಕಗಳು ಹಾಗೂ ನಿಯತಕಾಲಿಕೆಗಳನ್ನು ಒದಗಿಸುತ್ತಿವೆ.

7) **ಸಮುದಾಯ ಮಕ್ಕಳ ಕೇಂದ್ರಗಳು:** ರಾಜ್ಯದ 30 ಜಿಲ್ಲಾ ಕೇಂದ್ರಗಳಲ್ಲಿ 31 ಸಮುದಾಯ ಮಕ್ಕಳ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ಮಕ್ಕಳಿಗಾಗಿ ಪುಸ್ತಕ ವಿಭಾಗ, ಕಂಪ್ಯೂಟರ್ ವಿಭಾಗ, ಮನರಂಜನೆಗಾಗಿ ಆಟದ ಸಾಮಾನುಗಳ ವಿಭಾಗಗಳ ವ್ಯವಸ್ಥೆ ಮಾಡಲಾಗಿದೆ. ಈ ಕೇಂದ್ರದ ಒಳಾಂಗಣವನ್ನು ಮಕ್ಕಳಿಗೆ ಮುದನೀಡುವ ರೀತಿಯಲ್ಲಿ ಅಲಂಕರಿಸಲಾಗಿದೆ. ಈ ಕೇಂದ್ರಗಳಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಲಾಗಿದೆ.

8) **ಅಲೆಮಾರಿ ಜನಾಂಗದವರಿಗೆ ಗ್ರಂಥಾಲಯಗಳು:-** ಎಸ್.ಸಿ.ಪಿ, ಎಸ್.ಟಿ.ಪಿ. ಯೋಜನೆ ಅಡಿಯಲ್ಲಿ ಅಲೆಮಾರಿ ಸಮುದಾಯಗಳ ಉಪಯೋಗಕ್ಕಾಗಿ 127 ಗ್ರಂಥಾಲಯಗಳ ಪ್ರಾರಂಭ ಮಾಡಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಲೆಮಾರಿ ಜನಾಂಗದ ನೆಲೆಗಳಲ್ಲಿ ಇವುಗಳನ್ನು ಪ್ರಾರಂಭಿಸಲಾಗಿದೆ. ಇದರಂತೆ ಕೊಳಚೆ ಪ್ರದೇಶಗಳಲ್ಲಿಯೂ 100 ಗ್ರಂಥಾಲಯಗಳನ್ನು ಈ ಯೋಜನೆ ಅಡಿ ಪ್ರಾರಂಭಿಸಲಾಗಿದ್ದು ಇನ್ನು 115 ಗ್ರಂಥಾಲಯಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಕಡತವು ಸರ್ಕಾರದ ಹಂತದಲ್ಲಿದೆ.

ಸದರಿ ಗ್ರಂಥಾಲಯಗಳಿಗೆ ಪುಸ್ತಕ ಪೀಠೋಪಕರಣಗಳನ್ನು ಸರಬರಾಜು ಮಾಡಿ ಮೇಲ್ವಿಚಾರಕರ ಗೌರವಧನವನ್ನು ಸರ್ಕಾರದ ಆದೇಶದನ್ವಯ ಹೆಚ್ಚಿಸಿ ಗ್ರಂಥಾಲಯಗಳ ಅಭಿವೃದ್ಧಿಯನ್ನು ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ.

9) **ಗ್ರಂಥಾಲಯಗಳ ಆಧುನೀಕರಣ** :- ರಾಜ್ಯದ 30 ಜಿಲ್ಲೆಗಳು ಹಾಗೂ 26 ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಗಣಕ ಯಂತ್ರಗಳನ್ನು ಅಳವಡಿಸಲಾಗಿದ್ದು, ಆಯ್ದ ಕೆಲವು ಕೇಂದ್ರಗಳಲ್ಲಿ ಅಂತರ್ಜಾಲ ಸೌಲಭ್ಯವನ್ನು ಕೂಡಾ ಒದಗಿಸಲಾಗಿದೆ.

10) **ರಾಜಾ ರಾಮ್‌ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ** :- ಭಾರತ ಸರ್ಕಾರ ಸ್ವಾಮ್ಯದ ರಾಜಾ ರಾಮ್‌ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ, ಗ್ರಂಥಾಲಯ ಚಳುವಳಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆಸಲು ಸಹಾಯ ಹಸ್ತ ನೀಡಿದೆ. ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಚಳುವಳಿಯ ಮುನ್ನಡೆಗೆ ಇದರಿಂದ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಕರ್ನಾಟಕ ಸರ್ಕಾರ ಹಾಗೂ ಪ್ರತಿಷ್ಠಾನ ಎರಡೂ ಸಮಪಾಲು ನಿಧಿಯನ್ನು ವಿನಿಯೋಗಿಸಿ, ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿವೆ. ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯ ಸೇವೆಯನ್ನು ಒದಗಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಧನ ಸಹಾಯವನ್ನು ಸಹ ನೀಡಲಾಗುತ್ತಿದೆ ಹಾಗೂ ನ್ಯಾಷನಲ್ ಮಿಷನ್ ಆನ್ ಲೈಬ್ರರೀಸ್‌ನ ಗ್ರಂಥಾಲಯ ಆಧುನೀಕರಣ ಯೋಜನೆಯಡಿಯಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯ, ಶಿವಮೊಗ್ಗ ಗ್ರಂಥಾಲಯಗಳ ಆಧುನೀಕರಣ ಕಾಮಗಾರಿಯನ್ನು (75:25) ರ ಅನುಪಾತದಲ್ಲಿ ಕೈಗೊಳ್ಳಲಾಗಿದೆ.

11) **ಸಾಂಸ್ಕೃತಿಕ ಚಟುವಟಿಕೆಗಳು**:- ರಾಜ್ಯ ಕೇಂದ್ರ ಗ್ರಂಥಾಲಯವು ಇಲಾಖೆಯ ಮಾಹಿತಿ ಪ್ರಸರಣದ ಸಲುವಾಗಿ ಅನೇಕ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾರ್ವಜನಿಕ ಓದುಗರಿಗೆ ಹಮ್ಮಿಕೊಳ್ಳುತ್ತದೆ. ಪ್ರತಿ ವರ್ಷ ನವೆಂಬರ್ 14 ರಿಂದ 20ರವರೆಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಸಪ್ತಾಹದಲ್ಲಿ ವಿಚಾರ ಗೋಷ್ಠಿಗಳು, ಪುಸ್ತಕ ಪ್ರದರ್ಶನಗಳು, ಕ್ವಿಜ್ ಕಾರ್ಯಕ್ರಮಗಳು, ಪ್ರಬಂಧ ಸ್ಪರ್ಧೆ ಮುಂತಾದವುಗಳನ್ನು ವ್ಯವಸ್ಥೆಗೊಳಿಸಲಾಗುತ್ತಿದೆ.

ಸರ್ಕಾರದ ಆದೇಶ ಸಂ.ಇಡಿ 154 ಎಲ್‌ಐಬಿ 2007 ದಿನಾಂಕ 2007ರ ಅನ್ವಯ ಗ್ರಂಥಾಲಯ ವಿಜ್ಞಾನದ ಪಿತಾಮಹರಾದ ಡಾ॥ ಎಸ್.ಆರ್. ರಂಗನಾಥನ್‌ರವರ ಹುಟ್ಟುಹಬ್ಬದ ದಿನವಾದ ಆಗಸ್ಟ್ 12 ರಂದು 'ಗ್ರಂಥಪಾಲಕರ ದಿನಾಚರಣೆ' ಯೆಂದು ಘೋಷಿಸಲಾಗಿದೆ. ಇದರನ್ವಯ ರಾಜ್ಯದಲ್ಲಿ ಗ್ರಂಥಾಲಯಗಳ ಏಳಿಗೆಗೆ ದುಡಿದ ಮಹನೀಯರುಗಳಿಗೆ ಗೌರವ ಸಮರ್ಪಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಪ್ರತಿ ವರ್ಷ ಏಪ್ರಿಲ್ 23 ದಿನಾಂಕದಂದು 'ವಿಶ್ವ ಪುಸ್ತಕ ದಿನಾಚರಣೆ'ಯ ನಿಮಿತ್ತ ಓದುವ ಹವ್ಯಾಸ ಹೆಚ್ಚಿಸಲು, ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ.

12) **ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ** : ತರಬೇತಿ ಹೊಂದಿರದ ಗ್ರಂಥಾಲಯ ಉದ್ಯೋಗಿಗಳಿಗೆ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ನೀಡಲು ಗ್ರಂಥಾಲಯ ತರಬೇತಿ ಕೇಂದ್ರಗಳು ಬೆಂಗಳೂರು, ಮಂಗಳೂರು, ಧಾರವಾಡ ಹಾಗೂ ಗುಲ್ಬರ್ಗಾ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಂದು ತಂಡಕ್ಕೆ 80 ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಇಲಾಖೆಯ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸಿ ಆಡಳಿತಾತ್ಮಕ ಹಾಗೂ ತಾಂತ್ರಿಕ ವಿಷಯದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

13) ಆರ್ಥಿಕ ಸಂಪನ್ಮೂಲಗಳು : (ರೂ.ಲಕ್ಷಗಳಲ್ಲಿ)

ಅ) ಯೋಜನೆ

| ಲೆಕ್ಕಶೀರ್ಷಿಕೆ | ಹಂಚಿಕೆಯಾದ ಮೊತ್ತ |
|---|---|
| 1. 2205–00–105–0–01<br>ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು | 265.00 |
| 2. 2205–00–105–0–04<br>ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಗಳು | 5000.00 |
| 3. 2205–00–105–0–15<br>ಗ್ರಂಥಾಲಯಗಳಿಗೆ ಬೆಂಬಲ | 151.00 |
| ಒಟ್ಟು ಮೊತ್ತ | **5416.00** |

ಆ) ಯೋಜನೇತರ

| ಲೆಕ್ಕಶೀರ್ಷಿಕೆ | ಹಂಚಿಕೆಯಾದ ಮೊತ್ತ |
|---|---|
| 1. 2205–00–105–0–01<br>ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು | 3033.0 |
| 2. 2205–00–105–0–04<br>ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಗಳು | 2377.00 |
| 3. 2205–00–105–0–15<br>ಗ್ರಂಥಾಲಯಗಳಿಗೆ ಬೆಂಬಲ | 208.00 |
| ಒಟ್ಟು ಮೊತ್ತ | **5618.00** |

ಇ) ಗ್ರಂಥಾಲಯ ಕರ ರೂ. **6083.92** ಲಕ್ಷಗಳು

ಈ) ಆರ್.ಆರ್.ಆರ್.ಎಲ್.ಎಫ್. ಅನುದಾನ ರೂ. **300.00** ಲಕ್ಷಗಳು

| ಕ್ರ.ಸಂ. | ಆರ್.ಆರ್.ಆರ್.ಎಲ್.ಎಫ್ ಅನುದಾನ | ಮೊತ್ತ (ಲಕ್ಷಗಳಲ್ಲಿ) |
|---|---|---|
| 1. | ಆರ್.ಆರ್.ಆರ್.ಎಲ್.ಎಫ್ ಪ್ರತಿಷ್ಠಾನದ ಹೊಂದಾಣಿಕೆ ಯೋಜನೆಯಡಿ ಜಿಲ್ಲಾ ಕೇಂದ್ರ ಗ್ರಂಥಾಲಯ, ಗ್ರಾಮಪಂಚಾಯಿತಿ ಗ್ರಂಥಾಲಯಗಳಿಗೆ ಪುಸ್ತಕ, ಪೀಠೋಪಕರಣ ಸರಬರಾಜು ಹಾಗೂ ಸಿಬ್ಬಂದಿಗಳಿಗೆ ಕೌಶಲಾಭಿವೃದ್ಧಿ, ಕಟ್ಟಡ ನಿರ್ಮಾಣ. | ರೂ.300.00 ರಾಜ್ಯದ ಪಾಲಿನ ಅನುದಾನ<br>ರೂ.300.00 ಆರ್.ಆರ್.ಎಲ್.ಎಫ್.ನ ಪ್ರತಿಷ್ಠಾನದ ಅನುದಾನ<br>ಒಟ್ಟು:600.00 |

14) ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಂಕ್ಷಿಪ್ತ ಸಿಬ್ಬಂದಿ ಮಾಹಿತಿ

| ಕ್ರ.ಸಂ. | ಹುದ್ದೆಗಳ ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| 1. | ನಿರ್ದೇಶಕರು | 1 | 1 | 0 |
| 2. | ಉಪನಿರ್ದೇಶಕರು | 28 | 0 | 28 |
| 3. | ಮುಖ್ಯಗ್ರಂಥಾಲಯಾಧಿಕಾರಿ | 54 | 16 | 38 |
| 4. | ಆಡಳಿತಾಧಿಕಾರಿ | 2 | 0 | 2 |
| 5. | ಗ್ರಂಥಪಾಲಕರು | 93 | 66 | 27 |
| 6. | ಲೆಕ್ಕಪತ್ರ ಅಧೀಕ್ಷಕರು | 1 | 1 | 0 |
| 7. | ಅಧೀಕ್ಷಕರು | 11 | 10 | 1 |
| 8. | ಸಹಾಯಕಗ್ರಂಥಪಾಲಕರು | 132 | 54 | 78 |
| 9. | ಪ್ರ.ದ.ಸಹಾಯಕರು | 40 | 36 | 4 |
| 10. | ಶೀಘ್ರಲಿಪಿಗಾರರು | 2 | 1 | 1 |
| 11. | ಸಾಂಖ್ಯಿಕ ನಿರೀಕ್ಷಕರು | 1 | 1 | 0 |
| 12. | ಗಂಥಾಲಯ ಸಹಾಯಕರು | 529 | 344 | 185 |
| 13. | ದ್ವಿ.ದ.ಸಹಾಯಕರು | 60 | 47 | 13 |
| 14. | ಹಿರಿಯ ಬೆರಳಚ್ಚುಗಾರರು | 10 | 5 | 5 |
| 15. | ಬೆರಳಚ್ಚುಗಾರರು | 53 | 18 | 35 |
| 16. | ಹಿರಿಯ ವಾಹನಚಾಲಕರು | 2 | 0 | 2 |
| 17. | ವಾಹನ ಚಾಲಕರು | 22 | 13 | 9 |
| 18. | ಗ್ರಂಥಾಲಯ ಸಹವರ್ತಿ | 311 | 232 | 79 |
| 19. | ಜವಾನರು | 89 | 74 | 15 |
| 20. | ರಾತ್ರಿ ಕಾವಲುಗಾರರು | 40 | 16 | 24 |
| | ಒಟ್ಟು | **1481** | **935** | **546** |

15) **ಕಟ್ಟಡಗಳ ವಿವರ :** ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿರುವ ಶಾಖಾ ಗ್ರಂಥಾಲಯಗಳು, ಸೇವಾ ಕೇಂದ್ರಗಳು, ವಾಚನಾಲಯಗಳು ಮತ್ತು ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಸ್ವಂತ ಕಟ್ಟಡಗಳು, ಬಾಡಿಗೆ ಕಟ್ಟಡಗಳು ಹಾಗೂ ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಗ್ರಂಥಾಲಯಗಳು | ಸ್ವಂತ ಕಟ್ಟಡಗಳು | ಬಾಡಿಗೆ ಕಟ್ಟಡಗಳು | ಉಚಿತ ಕಟ್ಟಡಗಳು | ಒಟ್ಟು |
|---|---|---|---|---|---|
| 1. | ನಗರ ಕೇಂದ್ರ ಗ್ರಂಥಾಲಯ | 47 | 66 | 391 | 504 |
| 2. | ಜಿಲ್ಲಾ ಕೇಂದ್ರ ಗ್ರಂಥಾಲಯ | 129 | 35 | 332 | 496 |
| 3. | ಗ್ರಾಮಪಂಚಾಯಿತಿ ಗ್ರಂಥಾಲಯ | 445 | 0 | 5321 | 5766 |
| | ಒಟ್ಟು | 621 | 101 | 6044 | 6766 |

ಸರ್ಕಾರದ ಆದೇಶದನ್ವಯ, 2015-16ನೇ ಸಾಲಿಗೆ ಮುಂದುವರಿಕೆ ಕಾರ್ಯಕ್ರಮಗಳ ಮಂಜೂರಾತಿಗೆ ಸಂಬಂಧಿಸಿದಂತೆ, ಈ ಇಲಾಖೆಯ ಆಯ-ವ್ಯಯದಲ್ಲಿ ಲೆಕ್ಕಶೀರ್ಷಿಕೆ 2205-00-105-0-15(ಯೋಜನೆ) ಹಾಗೂ 2205-00-105-0-04 (059) (ಯೋಜನೆ) ಅಡಿಯಲ್ಲಿ ಕ್ರಮವಾಗಿ ರೂ.53.00 ಲಕ್ಷಗಳ ಹಾಗೂ ರೂ.200.00 ಲಕ್ಷಗಳ ಅನುದಾನದಲ್ಲಿ ಕೆಳಗಿನಂತೆ ಕಾಮಗಾರಿಗಳಿಗಾಗಿ ಹಂಚಿಕೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯ | ಕಾಮಗಾರಿ ವಿವರ | ಅಂದಾಜು ಮೊತ್ತ | ಇಲ್ಲಿಯವರೆಗೂ ಬಿಡುಗಡೆಗೊಳಿಸಿದ ಮೊತ್ತ | ಬಾಕಿ | 2015-16ನೇ ಸಾಲಿನಲ್ಲಿ ಬಿಡುಗಡೆ ಗೊಳಿಸಲಿರುವ ಮೊತ್ತ | ಷರಾ |
|---|---|---|---|---|---|---|---|
| 1. | ಜಿ.ಕೇ.ಗ್ರಂ, ಹಾವೇರಿ | ಸಂಗೂರು ಗ್ರಾ.ಪಂ.ಗ್ರಂ. ಕಟ್ಟಡ | 15.00 | 5.00 | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 2. | ನ.ಕೇ.ಗ್ರಂ, ಭದ್ರಾವತಿ | ಹಳೇನಗರ ಶಾಖಾ ಗ್ರಂ.ಕಟ್ಟಡ | 82.00 | 56.50 | 25.50 | 25.50 | ಕಾಮಗಾರಿ ಪ್ರಗತಿಯಲ್ಲಿದೆ |
| 3. | ಜಿ.ಕೇ.ಗ್ರಂ, ಶಿವಮೊಗ್ಗ | ಹೊಸನಗರ ಶಾಖಾಗ್ರಂ.ಕಟ್ಟಡ | 30.00 | 10.00 | 20.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 4. | ಜಿ.ಕೇ.ಗ್ರಂ, ಹಾಸನ | ಅರಸೀಕೆರೆ ಶಾಖಾ ಗ್ರಂ.ಕಟ್ಟಡ | 125.00 | 105.36 | 19.64 | 19.64 | ಕಾಮಗಾರಿ ಮುಕ್ತಾಯಗೊಂಡಿದೆ |
| 5. | ಜಿ.ಕೇ.ಗ್ರಂ, ಬೀದರ | ಬಸವಕಲ್ಯಾಣ ವಾಣಿಜ್ಯ ಮಳಿಗೆಗಳ ಉಳಿಕೆ ಕಾಮಗಾರಿ | 41.00 | 0 | 41.00 | 15.00 | ಕಾಮಗಾರಿ ಪ್ರಗತಿಯಲ್ಲಿದೆ |
| 6. | ಜಿ.ಕೇ.ಗ್ರಂ, ತುಮಕೂರು | ಶಿರಾ ಶಾಖಾ ಗ್ರಂ. ಕಟ್ಟಡ | 50.00 | 10.00 | 40.00 | 20.00 | ಕಾಮಗಾರಿ ಪ್ರಗತಿಯಲ್ಲಿದೆ |
| 7. | ಜಿ.ಕೇ.ಗ್ರಂ, ದಾವಣಗೆರೆ | ಹರಿಹರಶಾಖಾ ಗ್ರಂ.ಕಟ್ಟಡ | 13.70 | 0 | 13.70 | 8.00 | ಕಾಮಗಾರಿ ಪ್ರಗತಿಯಲ್ಲಿದೆ |
| 8. | ಜಿ.ಕೇ.ಗ್ರಂ, ದಾವಣಗೆರೆ | ತಿಪ್ಪಗೊಂಡನ ಹಳ್ಳಿಗ್ರಾ.ಪಂ.ಗ್ರಂ. ಕಟ್ಟಡ | 12.00 | 6.00 | 6.00 | 6.00 | ಕಾಮಗಾರಿ ಪ್ರಗತಿಯಲ್ಲಿದೆ |
| 9. | ಜಿ.ಕೇ.ಗ್ರಂ. ಬೆಂಗಳೂರು ನಗರ ಜಿಲ್ಲೆ | ಕರ್ಪೂರ ಗ್ರಾ.ಪಂ.ಗ್ರಂ. ಕಟ್ಟಡ | 18.25 | 0 | 18.25 | 10.86 | ಕಾಮಗಾರಿ ಪ್ರಗತಿಯಲ್ಲಿದೆ |
| 10. | ಜಿ.ಕೇ.ಗ್ರಂ. ಬೆಂಗಳೂರು ನಗರ ಜಿಲ್ಲೆ | ಮತಕೂರ (ಶಿವಕೋಟೆ) ಗ್ರಾ.ಪಂ.ಗ್ರಂ. ಕಟ್ಟಡ | 12.37 | 0 | 12.37 | 5.63 | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ. ಸಂ. | ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯ | ಕಾಮಗಾರಿ ಏವರ | ಅಂದಾಜು ಮೊತ್ತ | ಇಲ್ಲಿಯವರೆಗೂ ಬಿಡುಗಡೆಗೊಳಿಸಿದ ಮೊತ್ತ | ಬಾಕಿ | 2015–16ನೇ ಸಾಲಿನಲ್ಲಿ ಬಿಡುಗಡೆ ಗೊಳಿಸಲಿರುವ ಮೊತ್ತ | ಷರಾ |
|---|---|---|---|---|---|---|---|
| 11. | ಜಿ.ಕೇಗ್ರಂ, ಬೆಂಗಳೂರು ನಗರ ಜಿಲ್ಲೆ | ಆನೇಕಲ್ ಶಾಖಾ ಗ್ರಂ. ಕಟ್ಟಡ | 12.51 | 0 | 12.51 | 8.54 | ಕಾಮಗಾರಿ ಪ್ರಗತಿಯಲ್ಲಿದೆ |
| 12. | ಜಿ.ಕೇ.ಗ್ರಂ, ಬಳ್ಳಾರಿ | ಬನ್ನಿಗೋಳ ಗ್ರಾ.ಪಂ.ಗ್ರಂ. ಕಟ್ಟಡ | 10.00 | 5.00 | 5.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 13. | ಜಿ.ಕೇ.ಗ್ರಂ, ಬಳ್ಳಾರಿ | ಕೇಂದ್ರ ಕಛೇರಿ ಕಟ್ಟಡ | 2.46 | 0 | 2.46 | 2.46 | ಕಾಮಗಾರಿ ಪ್ರಗತಿಯಲ್ಲಿದೆ |
| 14. | ಜಿ.ಕೇ.ಗ್ರಂ, ಕೊಪ್ಪಳ | ಕುಷ್ಟಗಿ ಶಾಖಾ ಗ್ರಂ. ಕಟ್ಟಡ | 10.30 | 5.93 | 4.37 | 4.37 | ಕಾಮಗಾರಿ ಪ್ರಗತಿಯಲ್ಲಿದೆ |
| 15. | ಜಿ.ಕೇ.ಗ್ರಂ, ಕಾರವಾರ | ಅಂಕೋಲ ಶಾಖಾ ಗ್ರಂ. ಕಟ್ಟಡ | 24.50 | 0 | 24.50 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 16. | ಜಿ.ಕೇ.ಗ್ರಂ, ಬೆಳಗಾವಿ | ನಣದಿ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ (ರೂ.5.00 ಲಕ್ಷಗಳನ್ನು ಸ್ಥಳೀಯ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಡೆಯಲು ಸೂಚಿಸಲಾಗಿರುತ್ತದೆ) |
| 17. | ಜಿ.ಕೇ.ಗ್ರಂ. ಬೆಳಗಾವಿ | ಕಲ್ಲೋಳ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ. (ರೂ.5.00 ಲಕ್ಷಗಳನ್ನು ಸ್ಥಳೀಯ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಡೆಯಲು ಸೂಚಿಸಲಾಗಿರುತ್ತದೆ) |
| 18. | ಜಿ.ಕೇ.ಗ್ರಂ, ಬೆಳಗಾವಿ | ಶಮನೇವಾಡಿ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ(ರೂ.5.00 ಲಕ್ಷಗಳನ್ನು ಸ್ಥಳೀಯ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಡೆಯಲು ಸೂಚಿಸಲಾಗಿರುತ್ತದೆ) |

| ಕ್ರ. ಸಂ. | ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯ | ಕಾಮಗಾರಿ ವಿವರ | ಅಂದಾಜು ಮೊತ್ತ | ಇಲ್ಲಿಯವರೆಗೂ ಬಿಡುಗಡೆಗೊಳಿಸಿದ ಮೊತ್ತ | ಬಾಕಿ | 2015–16ನೇ ಸಾಲಿನಲ್ಲಿ ಬಿಡುಗಡೆ ಗೊಳಿಸಲಿರುವ ಮೊತ್ತ | ಷರಾ |
|---|---|---|---|---|---|---|---|
| 19. | ಜಿ.ಕೇ.ಗ್ರಂ, ಬೆಳಗಾವಿ | ಪಟ್ಟಣಕುಡಿ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ (ರೂ.5.00 ಲಕ್ಷಗಳನ್ನು ಸ್ಥಳೀಯ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಡೆಯಲು ಸೂಚಿಸಲಾಗಿರುತ್ತದೆ) |
| 20. | ಜಿ.ಕೇ.ಗ್ರಂ, ಕೋಲಾರ | ಪುತ್ತೂರು ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 21. | ಜಿ.ಕೇ.ಗ್ರಂ, ಮಂಗಳೂರು | ನರಿಮೊಗರು ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 22. | ಜಿ.ಕೇ.ಗ್ರಂ, ಮಂಗಳೂರು | ನೆಲ್ಲಾಡಿ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 23. | ಜಿ.ಕೇ.ಗ್ರಂ, ಮಂಗಳೂರು | ಆರಂತೋಡು ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 24. | ಜಿ.ಕೇ.ಗ್ರಂ, ಮಂಗಳೂರು | ಕಬಕ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 6.00 | ಕಾಮಗಾರಿ ಪ್ರಗತಿಯಲ್ಲಿದೆ |
| 25. | ಜಿ.ಕೇ.ಗ್ರಂ, ಮಂಗಳೂರು | ಶಿರಾಡಿ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 26. | ಜಿ.ಕೇ.ಗ್ರಂ, ಮಂಗಳೂರು | ಪೆರಾಬೆ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 27. | ಜಿ.ಕೇ.ಗ್ರಂ, ಮಂಗಳೂರು | ಪಾಣಿ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 6.00 | ಕಾಮಗಾರಿ ಪ್ರಗತಿಯಲ್ಲಿದೆ |
| 28. | ಜಿ.ಕೇ.ಗ್ರಂ, ಮಂಗಳೂರು | ಕಡೇಶಾಲ್ಯ ಗ್ರಾ.ಪಂ.ಗ್ರಂ. ಕಟ್ಟಡ | 10.00 | 0 | 10.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |
| 29. | ಜಿ.ಕೇ.ಗ್ರಂ, ಉಡುಪಿ | ಸಾಲಿಗ್ರಾಮ ಶಾಖಾ ಗ್ರಂ. ಕಟ್ಟಡ | 20.00 | 0 | 20.00 | 5.00 | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ. ಸಂ. | ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯ | ಕಾಮಗಾರಿ ವಿವರ | ಅಂದಾಜು ಮೊತ್ತ | ಇಲ್ಲಿಯವರೆಗೂ ಬಿಡುಗಡೆಗೊಳಿಸಿದ ಮೊತ್ತ | ಬಾಕಿ | 2015–16ನೇ ಸಾಲಿನಲ್ಲಿ ಬಿಡುಗಡೆ ಗೊಳಿಸಲಿರುವ ಮೊತ್ತ | ಷರಾ |
|---|---|---|---|---|---|---|---|
| 30. | ಜಿ.ಕೇ.ಗ್ರಂ, ಉಡುಪಿ | ಕುಂದಾಪುರ ಶಾಖಾ ಗ್ರಂ. ಕಟ್ಟಡ | 44.00 | 0 | 44.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 31. | ಜಿ.ಕೇ.ಗ್ರಂ, ಧಾರವಾಡ | ಹೆಬ್ಬಸೂರು ಶಾಖಾ ಗ್ರಂ. ಕಟ್ಟಡ | 25.00 | 0 | 25.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| | | ಒಟ್ಟು | 678.09 | 203.79 | 474.3 | 253.00 | |

2015–16ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ರಾಜ್ಯದ 5 ಗ್ರಂಥಾಲಯಗಳ ಕಟ್ಟಡಗಳ ಕಾಮಗಾರಿಗಾಗಿ ರೂ. 50.00 ಲಕ್ಷಗಳ ಅನುದಾನವನ್ನು ಈ ಕೆಳಗಿನಂತೆ ಹಂಚಿಕೆ ಮಾಡಲಾಗಿದೆ. (ಲೆಕ್ಕಶೀರ್ಷಿಕೆ 2205–00–105–0–15–422)

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯ | ಕಾಮಗಾರಿ ವಿವರ | ಅಂದಾಜು ಮೊತ್ತ | ಬಿಡುಗಡೆ–ಗೊಳಿಸಿದ ಮೊತ್ತ | ಪ್ರಗತಿ |
|---|---|---|---|---|---|
| 1. | ಜಿ.ಕೇ.ಗ್ರಂ ರಾಯಚೂರು | ಅಲೆಮಾರಿ ಗ್ರಂಥಾಲಯ, ಸುಕಾಲಪೇಟೆ, ಸಿಂಧನೂರು ಪಟ್ಟಣ. | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 2. | ಜಿ.ಕೇ.ಗ್ರಂ ರಾಯಚೂರು | ಅಲೆಮಾರಿ ಗ್ರಂಥಾಲಯ, ಮಾಳಗಡ್ಡಿ, ದೇವದುರ್ಗ ಪಟ್ಟಣ | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 3. | ಜಿ.ಕೇ.ಗ್ರಂ ಕೋಲಾರ | ಅಲೆಮಾರಿ ಗ್ರಂಥಾಲಯ, ಲಕ್ಷ್ಮೀಸಾಗರ, ಮಾಲೂರು ತಾಲ್ಲೂಕು. | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 4. | ಜಿಕೇಗ್ರಂ ಬೆಳಗಾವಿ | ಅಲೆಮಾರಿ ಗ್ರಂಥಾಲಯ, ಜೋಕಾನಹಟ್ಟಿ, ಗೋಕಾಕ ತಾಲ್ಲೂಕು. | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 5. | ಜಿಕೇಗ್ರಂ ಹಾವೇರಿ | ಅಲೆಮಾರಿ ಗ್ರಂಥಾಲಯ, ಹುಲಗಡ್ಡಿ, ಹಾನಗಲ್ ತಾಲ್ಲೂಕು. | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| | | ಒಟ್ಟು ಮೊತ್ತ | 50.00 | 50.00 | – |

2015–16ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ರಾಜ್ಯದ 2 ಗ್ರಂಥಾಲಯಗಳ ಕಟ್ಟಡಗಳ ಕಾಮಗಾರಿಗಾಗಿ ರೂ. 20.00 ಲಕ್ಷಗಳ ಅನುದಾನವನ್ನು ಈ ಕೆಳಗಿನಂತೆ ಹಂಚಿಕೆ ಮಾಡಲಾಗಿದೆ. (ಲೆಕ್ಕಶೀರ್ಷಿಕೆ 2205–00–105–0–15–423)

| ಕ್ರ. ಸಂ. | ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯ | ಕಾಮಗಾರಿ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಬಿಡುಗಡೆಗೊಳಿಸಿದ ಮೊತ್ತ(ಲಕ್ಷಗಳಲ್ಲಿ) | ಪ್ರಗತಿ |
|---|---|---|---|---|---|
| 1. | ಜಿ.ಕೇ.ಗ್ರಂ ಚಿತ್ರದುರ್ಗ | ಕೊಳಚೆ ಪ್ರದೇಶ ಗ್ರಂಥಾಲಯ, ಮೊಳಕಾಲ್ಮೂರು | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 2. | ಜಿ.ಕೇ.ಗ್ರಂ ಬಳ್ಳಾರಿ | ಕೊಳಚೆ ಪ್ರದೇಶ ಗ್ರಂಥಾಲಯ, ಶ್ರೀಧರಗಡ್ಡೆ, ಬಳ್ಳಾರಿ ತಾ॥, | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| | | ಒಟ್ಟು | 20.00 | 20.00 | |

16) ಪುಸ್ತಕ ಆಯ್ಕೆ ಮತ್ತು ಖರೀದಿ ವಿಧಾನ :
ಸಾರ್ವಜನಿಕ ಗ್ರಂಥಾಲಯ ಇಲಾಖೆ ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯಗಳಿಗೆ ಪುಸ್ತಕಗಳ ಆಯ್ಕೆ ಹಾಗೂ ಖರೀದಿಗೆ ಸಂಬಂಧಿಸಿದಂತೆ ಸಮಗ್ರವಾದ ನೀತಿಯನ್ನು ರೂಪಿಸಿ ಸರ್ಕಾರದ ಆದೇಶ ಸಂ. ಇಡಿ ಎಲ್ಐಬಿ 2004 ದಿ: 07–02–2005ರ ಆದೇಶದಂತೆ ಸರ್ಕಾರದ ಆದೇಶ ಸಂ. ಇಡಿ 411 ಎಲ್ಐಬಿ 2013, ಬೆಂಗಳೂರು, ದಿ: 08–05–2015ರಂತೆ ಶ್ರೀ ಶ್ರೀಕಂಠ ಕೂಡಿಗೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಉನ್ನತ ಪುಸ್ತಕ ಆಯ್ಕೆ ಸಮಿತಿಯನ್ನು ರಚಿಸಿದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಆಯಾ ವರ್ಷದಲ್ಲಿ ಪ್ರಕಟವಾಗುವ ಪುಸ್ತಕಗಳನ್ನು ಲೇಖಕರು, ಲೇಖಕ–ಪ್ರಕಾಶಕರು, ಪ್ರಕಟಣಾ ಸಂಸ್ಥೆಗಳು ಮತ್ತು ಪುಸ್ತಕ ವ್ಯಾಪಾರಿಗಳಿಂದ ಪುಸ್ತಕಗಳನ್ನು ಆಯ್ಕೆಗಾಗಿ ವರ್ಷಕ್ಕೆ 02 ಬಾರಿ ಸ್ವೀಕರಿಸಿ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಮುಂದೆ ಮಂಡಿಸಿ ಸಮಿತಿಯು ಆಯ್ಕೆ ಮಾಡಿದ ಉತ್ತಮ ಪುಸ್ತಕಗಳ ಪಟ್ಟಿಯನ್ನು ಸಿದ್ದಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಗೆ ಕಳುಹಿಸಿಕೊಡಲಾಗುವುದು.

ಸಂಬಂಧಿಸಿದ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳು ತಮ್ಮಲ್ಲಿ ಲಭ್ಯವಿರುವ ಆರ್ಥಿಕ ಪರಿಮಿತಿಯಲ್ಲಿ ಈ ಪಟ್ಟಿಯಲ್ಲಿನ ಅವಶ್ಯಕ ಪುಸ್ತಕಗಳನ್ನು ಖರೀದಿ ಮಾಡುವರು. ಪುಸ್ತಕಗಳ ಆಯ್ಕೆ ಕೇಂದ್ರೀಕೃತ ಆದರೆ ಖರೀದಿ ವಿಕೇಂದ್ರೀಕೃತವಾಗಿರುತ್ತದೆ. ಆಯಾ ಜಿಲ್ಲಾ/ನಗರ ಗ್ರಂಥಾಲಯಗಳ ಪ್ರಾಧಿಕಾರಗಳು ಆಯ–ವ್ಯಯದಲ್ಲಿ ಪುಸ್ತಕ ಖರೀದಿಗೆ ಇರುವ ಮೊತ್ತದಲ್ಲಿ 80% ರಷ್ಟು ಕನ್ನಡ ಪುಸ್ತಕಗಳನ್ನು ಖರೀದಿಸಲು ಮೀಸಲಿಡುತ್ತವೆ ಹಾಗೂ 20% ರಷ್ಟು ಮೊತ್ತವನ್ನು ಸ್ಥಳಿಯ ಲೇಖಕರು ಮತ್ತು ಇತರ ಭಾಷೆಯ ಪುಸ್ತಕಗಳ ಖರೀದಿಗಾಗಿ ಮೀಸಲಿಡುತ್ತವೆ.

2006–2007ನೇ ಸಾಲಿನಿಂದ ಏಕಗವಾಕ್ಷಿ ಯೋಜನೆಯಡಿ ಪುಸ್ತಕ ಖರೀದಿ ನಿಯಮವನ್ನು ಜಾರಿಗೆ ತಂದಿದ್ದು ಇದರಡಿ ಆಯ್ಕೆಯಾದ ಲೇಖಕ, ಲೇಖಕ–ಪ್ರಕಾಶಕ, ಪ್ರಕಟಣಾ ಸಂಸ್ಥೆಗಳು ಮತ್ತು ಪುಸ್ತಕ ವ್ಯಾಪಾರಿಗಳಿಂದ ಅತ್ಯುತ್ತಮ ಪುಸ್ತಕಗಳನ್ನು ಸರ್ಕಾರದ ಆದೇಶ ಸಂ. ಇಡಿ 68 ಎಲ್‌ಐಬಿ 2005 ದಿ: 02–09–2006ರ ಪ್ರಕಾರ ಒಂದು ಆರ್ಥಿಕ ವರ್ಷದಲ್ಲಿ ಗರಿಷ್ಠ ರೂ.1,00,000 (ಒಂದು ಲಕ್ಷ) ಮಿತಿಯೊಳಗೆ ಪುಸ್ತಕಗಳ ಕೇಂದ್ರೀಕೃತ ಖರೀದಿಗೆ ಅನುವು ಮಾಡಿಕೊಡಲಾಗಿದ್ದು ಲೇಖಕರು, ಲೇಖಕ–ಪ್ರಕಾಶಕರು, ಪ್ರಕಟಣಾ ಸಂಸ್ಥೆಗಳು ಮತ್ತು ಪುಸ್ತಕ ವ್ಯಾಪಾರಿಗಳ ಬೇಡಿಕೆಯನ್ನು ಈ ಮೂಲಕ ಸರ್ಕಾರ ಈಡೇರಿಸಿದಂತಾಗಿದೆ.

**17) ರಾಜಾ ರಾಂಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ ಯೋಜನೆಯಡಿ 2015–16ನೇ ಸಾಲಿನಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ಪಟ್ಟಿ :–**

1973ರಲ್ಲಿ ಸ್ಥಾಪನೆಯಾದ ರಾಜಾ ರಾಂಮೋಹನ್ ರಾಯ್ ಪ್ರತಿಷ್ಠಾನ ದೇಶಾದ್ಯಂತ ಜನರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಸಾರ್ವಜನಿಕ ಗ್ರಂಥಾಲಯ ಚಳುವಳಿಗೆ ಒತ್ತಾಸೆ ನೀಡಿ ಅದನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಸಾಧಿಸುತ್ತಿದೆ. ಪ್ರತಿಷ್ಠಾನ ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳು ಗ್ರಂಥಾಲಯ ಸೇವೆಯಲ್ಲಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು, ವಯಸ್ಕರ ಶಿಕ್ಷಣ ಹಾಗೂ ಇಂತಹ ಇತರ ಸಂಘ ಸಂಸ್ಥೆಗಳಿಗೆ ಸಮಪಾಲು ನಿಧಿ ಮತ್ತು ಹೊಂದಾಣೀಕೇತರ ನಿಧಿ ಯೋಜನೆ ಅಡಿಯಲ್ಲಿ ಅನುದಾನ ಒದಗಿಸುವ ಮೂಲಕ ತನ್ನ ಗುರಿಯನ್ನು ಸಾಧಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರ 1973 ರಿಂದಲೂ ಪ್ರತಿಷ್ಠಾನದ ನೆರವಿನ ಯೋಜನೆಗಳಿಂದ ಗ್ರಾಮೀಣ ಗ್ರಂಥಾಲಯಗಳ ಅಭಿವೃದ್ಧಿಗೆ ಸಹಾಯ ಪಡೆಯುತ್ತಿದೆ. ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ ಸ್ವಯಂ ಸೇವಾ ಸಂಸ್ಥೆಗಳು ಸಹ ಹೊಂದಾಣಿಕೇತರ ಯೋಜನೆ ಅಡಿ ಧನಸಹಾಯ ಪಡೆದು ಗ್ರಂಥಾಲಯಗಳಿಗೆ ಪುಸ್ತಕ, ಪೀಠೋಪಕರಣ, ಕಟ್ಟಡ ಮುಂತಾದವುಗಳಿಗೆ ಧನ ಸಹಾಯ ಪಡೆದಿವೆ. ಪ್ರತಿಷ್ಠಾನದ ಯೋಜನೆಗಳು ಕೆಳಕಂಡಂತಿವೆ.

1. ಪುಸ್ತಕಗಳ ಖರೀದಿ.
2. ಮಕ್ಕಳ ಗ್ರಂಥಾಲಯಗಳು
3. ಮಹಿಳಾ ವಿಭಾಗ
4. ಹಿರಿಯ ನಾಗರೀಕರ ವಿಭಾಗ
5. ಕಟ್ಟಡಗಳು
6. ಗಣಕಯಂತ್ರಗಳು
7. ಗಣಕೀಕರಣ
8. ಸಂಗ್ರಹಣಾ ಸಾಮಗ್ರಿಗಳು
9. ಸಮ್ಮೇಳನಗಳು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಸಮಪಾಲು ನಿಧಿ ಯೋಜನೆ ಅಡಿ ಧನ ಸಹಾಯವನ್ನು ಈ ಮೇಲಿನ ಶೀರ್ಷಿಕೆಗಳಿಗೆ ಪಡೆಯಲು ನಿರ್ಣಯಿಸಿದೆ. ಈ ಯೋಜನೆಯ ಉಸ್ತುವಾರಿಗೆ ಮಾನ್ಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಗ್ರಂಥಾಲಯ ಸಮಿತಿಯು ಕಾರ್ಯ ನಿರ್ವಹಿಸುತ್ತಿದೆ.

2014–15ರ ರಾಜ್ಯದ ಪಾಲಿನ ಹೊಂದಾಣಿಕೆ ಅನುದಾನ ರೂ. 300.00 ಲಕ್ಷಗಳನ್ನು ಮಾರ್ಚ ಅಂತ್ಯಕ್ಕೆ ಬಿಡುಗಡೆ ಮಾಡಿದ್ದರಿಂದ ರಾಜ್ಯದ ಅನುದಾನವನ್ನು ಪ್ರತಿಷ್ಠಾನಕ್ಕೆ ಈಗ ಕಳುಹಿಸಿದ್ದು ಸದರಿ ಹೊಂದಾಣಿಕೆ ಮೊತ್ತವನ್ನು 2015–16ನೆ ಸಾಲಿನಲ್ಲಿ ಬಳಸಿಕೊಳ್ಳಲಾಗುತ್ತಿದೆ.

18) <u>ಅಂಕಿ ಅಂಶಗಳು</u> : ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿರುವ ಒಟ್ಟು ಗ್ರಂಥಾಲಯಗಳು

| ಕ್ರ.ಸಂ | ಗ್ರಂಥಾಲಯಗಳ ಹೆಸರು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯಗಳ ವಿವರ |
|---|---|---|
| 1 | ರಾಜ್ಯ ಕೇಂದ್ರ ಗ್ರಂಥಾಲಯ | 1 |
| 2. | ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ | 1 |
| 3. | ಜಿಲ್ಲಾ ಕೇಂದ್ರ ಗ್ರಂಥಾಲಯಗಳು | 30 |
| 4. | ನಗರ ಕೇಂದ್ರ ಗ್ರಂಥಾಲಯಗಳು | 26 |
| 5. | ಸಂಚಾರಿ ಗ್ರಂಥಾಲಯಗಳು | 10 |
| 6. | ಶಾಖಾ ಗ್ರಂಥಾಲಯಗಳು | 485 |
| 7. | ಸೇವಾ ಕೇಂದ್ರಗಳು | 120 |
| 8. | ವಾಚನಾಲಯಗಳು | 80 |
| 9. | ಗ್ರಾಮ ಪಂಚಾಯಿತಿ ಗ್ರಂಥಾಲಯಗಳು | 5766 |
| 10. | ಕೊಳಚೆ ಪ್ರದೇಶದ ಗ್ರಂಥಾಲಯಗಳು | 100 |
| 12. | ಅಲೆಮಾರಿ ಗ್ರಂಥಾಲಯಗಳು | 127 |
| 13. | ಸಮುದಾಯ ಮಕ್ಕಳ ಕೇಂದ್ರ ಗ್ರಂಥಾಲಯಗಳು | 31 |
| | ಒಟ್ಟು | 6777 |

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಂಕಿಅಂಶಗಳ ವಿವರ:– (ಲಕ್ಷಗಳಲ್ಲಿ)

| ಕ್ರ ಸಂ | ಒಟ್ಟು ಪುಸ್ತಕಗಳ ಸಂಖ್ಯೆ | ಒಟ್ಟು ಸದಸ್ಯತ್ವ ಸಂಖ್ಯೆ | ದಿನನಿತ್ಯ ಗ್ರಂ.ಕ್ಕೆ ಭೇಟಿ ನೀಡುವವರ ಸಂಖ್ಯೆ | ದಿನನಿತ್ಯ ಪುಸ್ತಕಗಳನ್ನು ಎರವಲು ಪಡೆಯುವವರ ಸಂಖ್ಯೆ | ಒಟ್ಟು ದಿನಪತ್ರಿಕೆಗಳ ಸಂಖ್ಯೆ (ವರ್ಷಕ್ಕೆ) | ಒಟ್ಟು ನಿಯತ ಕಾಲಿಕೆಗಳ ಸಂಖ್ಯೆ (ವರ್ಷಕ್ಕೆ) |
|---|---|---|---|---|---|---|
| (1) | 346.55 | 18.20 | 581.31 | 168.20 | 89.69 | 32.58 |

20) 2015–16ನೇ ಸಾಲಿನಲ್ಲಿ ಇಲಾಖೆಯಿಂದ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ವಿವರ

1. ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ರೂ. 70.00 ಲಕ್ಷಗಳ ವೆಚ್ಚದಲ್ಲಿ ರೂ. 10.00 ಲಕ್ಷಕ್ಕೆ ಸೀಮಿತವಾದಂತೆ 05 ಅಲೆಮಾರಿ ಮತ್ತು 02 ಕೊಳಚೆ ಪ್ರದೇಶ ಗ್ರಂಥಾಲಯ ಕಟ್ಟಡಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.

2. ಕೊಳಚೆ ಪ್ರದೇಶಗಳಲ್ಲಿ 100 ಗ್ರಂಥಾಲಯಗಳು ರಾಜ್ಯದ ವಿವಿಧೆಡೆ ಕಾರ್ಯನಿರ್ವಹಿಸುತ್ತಿದ್ದು, ಕೊಳಚೆಪ್ರದೇಶಗಳಲ್ಲಿ ವಾಸಿಸುವ ಜನತೆಗೆ ಗ್ರಂಥಾಲಯ ಸೌಲಭ್ಯ ಒದಗಿಸಲಾಗಿದ್ದು, ಅವುಗಳ ಮುಂದುವರಿಕೆ ಕಾರ್ಯ ನಿರ್ವಹಿಸಲಾಗಿದೆ.

3. ಅಲೆಮಾರಿ ಜನತೆಗೆ ಉಪಯುಕ್ತ 127 ಗ್ರಂಥಾಲಯಗಳನ್ನು ಪ್ರಾರಂಭಿಸಿ, ಅಲೆಮಾರಿ ಜನಾಂಗದವರಿಗೆ ಅವರ ನೆಲೆಯಲ್ಲಿ ಗ್ರಂಥಾಲಯಗಳನ್ನು ಒದಗಿಸಲಾಗಿದ್ದು, ಅವುಗಳ ಮುಂದುವರಿಕೆ ಕಾರ್ಯ ನಿರ್ವಹಿಸಲಾಗಿದೆ.

4. ರೂ.253.00ಲಕ್ಷಗಳ ವೆಚ್ಚದಲ್ಲಿ ಜಿಲ್ಲಾ/ನಗರ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಿಸಲು, ಕಟ್ಟಡ ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

5. ಜಿಲ್ಲಾ ಕೇಂದ್ರ ಗ್ರಂಥಾಲಯ ಕಾರವಾರದ ಸಿರಸಿ, ಹಳಿಯಾಳ & ಜೊಯಿಡಾ ತಾಲ್ಲೂಕು ಗ್ರಂಥಾಲಯಗಳ ಕಟ್ಟಡ ನಿರ್ಮಾಣಕ್ಕೆ ವಿಶೇಷ ಅನುದಾನ ರೂ. 75.00 ಲಕ್ಷ ಮಂಜೂರಾಗಿದ್ದು, ಮೊದಲನೇ ಕಂತಿನಲ್ಲಿ ಶೇ.33% ರಷ್ಟು ಅನುದಾನ ಬಿಡುಗಡೆಯಾಗಿದ್ದು ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.

6. ರಾಜ್ಯದಲ್ಲಿನ ಎಲ್ಲ ಗ್ರಂಥಾಲಯಗಳಿಗೆ ಮೂಲಭೂತ ಸೌಕರ್ಯಗಳಾದ, ಕಟ್ಟಡ, ಪೀಠೋಪಕರಣ, ಪುಸ್ತಕಗಳನ್ನು ಹಾಗೂ ಇನ್ನಿತರೆ ಗ್ರಂಥಾಲಯಕ್ಕೆ ಅವಶ್ಯಕತೆಯಿರುವ ಸಾಮಗ್ರಿಗಳನ್ನು ಸಾರ್ವಜನಿಕ ಹಿತದೃಷ್ಟಿಯ ಮೇರೆಗೆ ಒದಗಿಸಲು ಸಮಗ್ರ ಯೋಜನೆಯನ್ನು ರೂಪಿಸಲಾಗಿದೆ.

7. ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಕಟ್ಟಡ, ತಾಲ್ಲೂಕು ಕೇಂದ್ರಗಳಲ್ಲಿ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಲು ಆಯಾ ಕ್ಷೇತ್ರದಲ್ಲಿ ಲಭ್ಯವಾಗುವ ಸಂಸದರು ಹಾಗೂ ಇತರ ಮೂಲಗಳಿಂದ ಲಭ್ಯವಾಗುವ ನಿಧಿಯನ್ನು ಈ ಕಾರ್ಯಕ್ಕೆ ವಿನಿಯೋಗಿಸಲಾಗಿದ್ದು ಕಾರ್ಯಕ್ರಮ ಪ್ರಗತಿಯಲ್ಲಿದೆ.

8. ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಮಾಹಿತಿ ಕೇಂದ್ರಗಳಾಗಿ ಸಾರ್ವಜನಿಕರಿಗೆ ಉಪಯುಕ್ತ ಗ್ರಂಥಾಲಯಗಳಾಗಿ ಮಾರ್ಪಡಿಸಲಾಗುವುದು. ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕೇಂದ್ರಗಳಲ್ಲಿ ಡಿಜಿಟಲ್ ಜ್ಞಾನಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

9. ಗ್ರಂಥಾಲಯಗಳ ಸುವ್ಯವಸ್ಥೆ, ಗ್ರಂಥಾಲಯಗಳಿಗೆ ಪೀಠೋಪಕರಣ, ಪತ್ರಿಕೆ ಪುಸ್ತಕ ಹಾಗೂ ಪರಾಮರ್ಶನ ಪುಸ್ತಕಗಳ ಸರಬರಾಜು ಹಾಗೂ ಸುಸಜ್ಜಿತ ಕಟ್ಟಡ ನಿರ್ಮಾಣದ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿ ಚುರುಕಾಗಿ ಕೆಲಸ ನಿರ್ವಹಿಸಲು ಹಾಗೂ ಆಡಳಿತಾತ್ಮಕ ವಿಷಯದ ಬಗ್ಗೆ ತಿಳಿದುಕೊಳ್ಳಲು ಜಿಲ್ಲಾ ತರಬೇತಿ ಸಂಸ್ಥೆ ಹಾಗೂ ಆಡಳಿತ ಸಂಸ್ಥೆಯಲ್ಲಿ ತರಬೇತಿಯನ್ನು ನೀಡಿ ಇಲಾಖಾ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

10. ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸಮರ್ಪಕ ಕಟ್ಟಡಗಳ ನಿರ್ಮಾಣ ನಮ್ಮ ಆದ್ಯತೆ, ಇದರೊಂದಿಗೆ ಓದುಗರ ಬೇಡಿಕೆಯಾದ ನಿಯತಕಾಲಿಕೆ, ಪುಸ್ತಕಗಳ ಸರಬರಾಜು ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

11. ಕರ್ನಾಟಕದ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳು ಐ.ಎ.ಎಸ್., ಐ.ಎಫ್.ಎಸ್., ಕೆ.ಎ.ಎಸ್. ಹಾಗೂ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಾಗಿ ತೇರ್ಗಡೆ ಆಗುತ್ತಿಲ್ಲ, ಅವರುಗಳಿಗೆ ಅನುಕೂಲಗಳಿಲ್ಲ ಎಂಬ ಮಾತು ಕೇಳಿಬರುತ್ತಿತ್ತು. ಈಗ ಇದರ ನಿವಾರಣೆಗೆ ಪ್ರತಿ ತಾಲ್ಲೂಕಿನ ಗ್ರಂಥಾಲಯದಲ್ಲಿಯೂ ಸ್ಪರ್ಧಾತ್ಮಕ ಪುಸ್ತಕಗಳ ವಿಭಾಗ ತೆರೆಯಲಾಗಿದೆ.

12. ಗ್ರಂಥಾಲಯ ಆಧುನೀಕರಣ ಇಂದಿನ ಅವಶ್ಯಕತೆಯಾಗಿರುವುದರಿಂದ ಎಲ್ಲ ಗ್ರಂಥಾಲಯಗಳಿಗೆ ಗಣಕಯಂತ್ರಗಳನ್ನು ಒದಗಿಸಲು ಕ್ರಮವಹಿಸಲಾಗಿದೆ.

13. ರಾಜ್ಯದ ಬೆಂಗಳೂರು ಮಹಾನಗರಪಾಲಿಕೆ ಹಾಗೂ ಇತರ ಪ್ರಮುಖ ನಗರ ಪಾಲಿಕೆಗಳ ಎಲ್ಲಾ ವಾರ್ಡ್‌ಗಳಲ್ಲಿ ಗ್ರಂಥಾಲಯಗಳನ್ನು ತೆರೆಯುವ ಯೋಜನೆ ಹಮ್ಮಿಕೊಳ್ಳಲಾಗಿದೆ.

14. ರಾಜ್ಯದಲ್ಲಿ 30 ಜಿಲ್ಲಾ ಕೇಂದ್ರಗಳಲ್ಲಿ 31 ಸಮುದಾಯ ಮಕ್ಕಳ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದ್ದು ಕಾರ್ಯಕ್ರಮ ಪ್ರಗತಿಯಲ್ಲಿದೆ.

15. ಸರ್ಕಾರದ ಆದೇಶದನ್ವಯ ಆಗಸ್ಟ್ 12ರಂದು ರಾಜ್ಯಾದ್ಯಂತ ಗ್ರಂಥಪಾಲಕರ ದಿನಾಚರಣೆಯನ್ನು ಆಚರಿಸಲಾಗುವುದು. ಈ ಸಂದರ್ಭದಲ್ಲಿ ಗ್ರಂಥಾಲಯ ವಿಜ್ಞಾನ, ಗ್ರಂಥಾಲಯಗಳ ಅಭಿವೃದ್ಧಿಗೆ ದುಡಿದ ಮಹನೀಯರಿಗೆ ಗೌರವ ಪೂರ್ವಕವಾಗಿ ಸನ್ಮಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

16. ಪ್ರತಿ ವರ್ಷವೂ ನಡೆಯುವ ಹಾಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವನ್ನು 2015–16ನೇ ಸಾಲಿನಲ್ಲಿ ನವೆಂಬರ್ 14 ರಿಂದ 20 ರವರೆಗೆ ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ ಪ್ರಕಾಶಕರು, ಲೇಖಕರು, ಸಾಹಿತಿಗಳು, ಚಿಂತಕರು ಮತ್ತು ಆಸ್ತಕರು ಹಾಗೂ ಸಾರ್ವಜನಿಕ ಓದುಗರು ಮತ್ತು ಇಲಾಖೆಯ ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದವರು ಈ ಸಪ್ತಾಹದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಿಬ್ಬಂದಿಯವರಿಗೆ ಇಲಾಖಾವತಿಯಿಂದ ಗ್ರಂಥಾಲಯ ಸೇವಾ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

17. ರಾಜಾ ರಾಂಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ ಹಾಗೂ ರಾಜ್ಯ ಸರ್ಕಾರದ ಯೋಜನೆಯಡಿ ನ್ಯಾಷನಲ್ ಮಿಷನ್ ಆನ್ ಲೈಬ್ರರಿಸ್ ಸಹಯೋಗದೊಂದಿಗೆ 75:25 ಅನುಪಾತದಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯ, ಶಿವಮೊಗ್ಗ ಗ್ರಂಥಾಲಯಗಳ ಆಧುನೀಕರಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದ್ದು ರಾಜ್ಯದ ಪಾಲಿನ ಸಮಪಾಲು ನಿದಿಯನ್ನು ಬಿಡುಗಡೆ ಮಾಡಲಾಗಿದ್ದು ಕಟ್ಟಡದ ಆಧುನೀಕರಣ ಕಾರ್ಯ ಪ್ರಗತಿಯಲ್ಲಿದೆ.

18. ಗ್ರಂಥಾಲಯಗಳನ್ನು ಸಾಂಸ್ಕೃತಿಕ ಕೇಂದ್ರಗಳನ್ನಾಗಿ ಪರಿವರ್ತಿಸಲು ಅನೇಕ ಕಾರ್ಯಕ್ರಮಗಳಾದ ವಿಚಾರ ಸಂಕೀರ್ಣ, ಕವಿಗೋಷ್ಠಿ, ಪುಸ್ತಕ ಸಂಸ್ಕೃತಿ ಬೆಳೆಸಲು ಪುಸ್ತಕ ಪ್ರದರ್ಶನ ಇತ್ಯಾದಿಗಳನ್ನು ಹಮ್ಮಿಕೊಳ್ಳಲಾಗಿದೆ.

19. 2014ರ ಗ್ರಂಥಸೂಚಿಯನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ.

20. ಗ್ರಂಥಾಲಯ ತರಬೇತಿ ಶಾಲೆಗಳನ್ನು ಬೆಂಗಳೂರು, ಧಾರವಾಡ, ಗುಲ್ಬರ್ಗ ಹಾಗೂ ಮಂಗಳೂರು ನಗರಗಳಲ್ಲಿ ಪ್ರಾರಂಭಿಸಿ ತರಬೇತಿ ನೀಡಲಾಗುತ್ತಿದೆ.

21. ಆರ್.ಆರ್.ಆರ್.ಎಲ್.ಎಫ್ ಗ್ರಂಥಾಲಯ ಪ್ರತಿಷ್ಠಾನದಿಂದ ಯೋಜನಾ ಅಡಿಯಲ್ಲಿ ಗ್ರಾಮಪಂಚಾಯಿತಿ ಗ್ರಂಥಾಲಯಗಳ ಮೇಲ್ವಿಚಾರಕರುಗಳಿಗೆ ಕೌಶಲ್ಯಾಭಿವೃದ್ಧಿ ಹಾಗೂ ಪುನಃಶ್ಚೇತನ ಶಿಬಿರವನ್ನು ಒಟ್ಟು 18 ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ ಹಮ್ಮಿಕೊಳ್ಳಲಾಗಿದೆ ಹಾಗು ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯ, ಬೆಳಗಾವಿ, ಗದಗ, ವಿಜಯಪುರ, ಚಿಕ್ಕಬಳ್ಳಾಪುರ ಹಾಗೂ ಚಿತ್ರದುರ್ಗ ಸಿಬ್ಬಂದಿಯವರಿಗೆ ತಾಂತ್ರಿಕ ಕಾರ್ಯಗಾರ ಏರ್ಪಡಿಸಲು ಅನುದಾನ ಬಿಡುಗಡೆ ಮಾಡಲಾಗಿದೆ.

22. ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ ಪಾರಂಪರಿಕ ಕಟ್ಟಡವಾಗಿದ್ದು, ಸದರಿ ಕಟ್ಟಡಕ್ಕೆ 100 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಅವರ ಗೌರವ ಅಧ್ಯಕ್ಷತೆಯಲ್ಲಿ ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ “ಶತಮಾನೋತ್ಸವ ಆಚರಣೆ” ನಿಮಿತ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಶತಮಾನೋತ್ಸವ ಆಚರಣೆ ನಿಮಿತ್ತ “ಶತಮಾನದ ಬೆಳಕು ಒಂದು ಸಾಂಸ್ಕೃತಿಕ ಹೊತ್ತಿಗೆ” ಎಂಬ ಪುಸ್ತಕವನ್ನು ಹೊರತರಲಾಗುತ್ತಿದೆ ಹಾಗೂ 2016ರ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಮಾಹಿತಿಯನ್ನುಳ್ಳ ಕ್ಯಾಲೆಂಡರನ್ನು ಹೊರತರಲಾಗಿದೆ.

23. ಹೊಸ ಬಡಾವಣೆಗಳಲ್ಲಿ ಗ್ರಂಥಾಲಯಗಳಿಗಾಗಿ ಸಿ.ಎ. (C.A) ನಿವೇಶನ ಪಡೆದು ಕಟ್ಟಡಗಳ ನಿರ್ಮಾಣಕ್ಕೆ ಕ್ರಮ ಜರುಗಿಸಲಾಗುತ್ತಿದೆ.

24. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಆರ್ಥಿಕವಾಗಿ ಸದೃಢವಾಗಿರುವ ಗ್ರಂಥಾಲಯಗಳಿಂದ ಆರ್ಥಿಕವಾಗಿ ದುರ್ಬಲವಾಗಿರುವ ಗ್ರಂಥಾಲಯಗಳಿಗೆ ಪುಸ್ತಕಗಳು, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ನೀಡಲಾಗುತ್ತಿದೆ.

**ಮುಂದಿನ ಮೂರು ವರ್ಷಗಳಲ್ಲಿ ಇಲಾಖೆಯು ಕೈಗೆತ್ತಿಕೊಳ್ಳಲಿರುವ ಕಾರ್ಯಕ್ರಮಗಳು:**

- ಜಿಲ್ಲಾ/ನಗರ/ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಸುಸಜ್ಜಿತ ಗ್ರಂಥಾಲಯಗಳನ್ನಾಗಿ ಮಾರ್ಪಾಡಿಸಿ ಮೇಲ್ದರ್ಜೆಗೇರಿಸುವುದು.
- 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಅಡಿಯಲ್ಲಿ 31 ಸಮುದಾಯ ಮಕ್ಕಳ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು.
- ಜಿಲ್ಲಾ/ನಗರ ಗ್ರಂಥಾಲಯಗಳಲ್ಲಿ ಗಣಕೀಕರಣ ಕಾರ್ಯವನ್ನು ಕೈಗೊಂಡು ಗ್ರಂಥಾಲಯಗಳ ಜಾಲ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು.
- 1965ರ ಸಾರ್ವಜನಿಕ ಗ್ರಂಥಾಲಯ ಇಲಾಖೆ ಕಾಯ್ದೆ ಪ್ರಕರಣ ಸಂಖ್ಯೆ 30ಕ್ಕೆ ತಿದ್ದುಪಡಿ ಮಾಡಲು ಕ್ರಮ ವಹಿಸಲಾಗುತ್ತಿದ್ದು, ಇದರಿಂದ ಸ್ಥಳೀಯ ಸಂಸ್ಥೆಯವರು ಸಾರ್ವಜನಿಕರಿಂದ ಆಸ್ತಿ ತೆರಿಗೆಯ ಮೇಲೆ ಆಕರಿಸಿದ ಶೇ.6 ರ ಗ್ರಂಥಾಲಯ ಕರ ಸಂಗ್ರಹಿಸಿದ ಮೊತ್ತವನ್ನು ಆಗಿಂದಾಗ್ಗೆ ಸಂಬಂಧಿಸಿದ ಗ್ರಂಥಾಲಯ ಪ್ರಾಧಿಕಾರಕ್ಕೆ ಜಮಾ ಮಾಡಲು ವಿಳಂಬ ಅನುಸರಿಸಿದಲ್ಲಿ ಅದಕ್ಕೆ ದಂಡ ವಿಧಿಸುವ ಇಲ್ಲವೇ ಬಡ್ಡಿ ಆಕರಿಸುವ ಕುರಿತು ತಿದ್ದುಪಡಿ ಪ್ರಸ್ತಾಪಿಸಿದೆ.
- 176 ತಾಲ್ಲೂಕು ಕೇಂದ್ರ ಗ್ರಂಥಾಲಯಗಳಲ್ಲಿ ಮಕ್ಕಳ ವಿಭಾಗ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ವಿಭಾಗಗಳನ್ನು ಬಲಪಡಿಸಲಾಗುವುದು.
- ಓದುಗರಿಗೆ ಉಪಯುಕ್ತವಾದ ಗ್ರಂಥಗಳು, ಸಾಂಧರ್ಭಿಕ ಗ್ರಂಥಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾಗುವಂತಹ ಪುಸ್ತಕಗಳನ್ನು ಗ್ರಂಥಾಲಯ ಗಳಿಗೆ ಒದಗಿಸಲು ಕ್ರಮ ಕೈಗೊಳ್ಳುವುದು.
- ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
- ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಡಿಜಿಟಲ್ ಜ್ಞಾನಕೇಂದ್ರಗಳನ್ನಾಗಿ /ಮಾಹಿತಿ ಕೇಂದ್ರಗಳನ್ನಾಗಿ ಮಾರ್ಪಡಿಸಿ ಗ್ರಾಮೀಣ ಜನತೆಗೆ ಉಪಯುಕ್ತ ಮಾಹಿತಿ ಒದಗಿಸಲು ಕ್ರಮ ಕೈಗೊಳ್ಳುವುದು.
- ಇ-ಆಡಳಿತ ಚಟುವಟಿಕೆಯನ್ನು ಅಭಿವೃದ್ಧಿಪಡಿಸುವುದು.
- ರಾಜ್ಯಾದ್ಯಂತ 5766 ಗ್ರಾಮಪಂಚಾಯಿತಿ ಗ್ರಂಥಾಲಯಗಳಲ್ಲಿ ಏಕತೆರನಾದ ಮಾದರಿ ಕಟ್ಟಡಗಳನ್ನು ನಿರ್ಮಿಸಲು ಮುಖ್ಯ ವಾಸ್ತುಶಿಲ್ಪಿಗಳಿಂದ ನೀಲಿ ನಕ್ಷೆಯನ್ನು ತಯಾರಿಸಿದ್ದು, ಇದರನ್ವಯ ಗ್ರಾಮಪಂಚಾಯಿತಿ ಗ್ರಂಥಾಲಯ ಏಕತೆರನಾದ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.
- ಇಲಾಖೆಯ ವೃಂದ & ನೇಮಕಾತಿ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡಿದ್ದು ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ವಿಷಯವು ಸರ್ಕಾರದ ಅಂತಿಮ ಹಂತದಲ್ಲಿದೆ.

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು